**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 350/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ವೈ.ಟಿ. ಮಹೇಶ |
| ತಂದೆಯ ಹೆಸರು | : | ವೈ.ಟಿ. ತಮ್ಮಯ್ಯ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 21.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಆರೋಪಿ ನನಗೆ ಪರಿಚಯ. ದಿನಾಂಕಃ 04.05.2023 ರಂದು ಹೆಚ್.ಡಿ. ಕೋಟೆಯ, ಕಸಬಾ ಹೋಬಳಿ ಸ.ನಂ. 166/9 ರ 04 ಎಕರೆ ಜಮೀನಿನಲ್ಲಿ ನಾನು ವ್ಯವಸಾಯದ ಕೆಲಸ ಮಾಡುತ್ತಿದ್ದಾಗ ಪಕ್ಕದ ಜಮೀನಿನವನಾದ ಆರೋಪಿ ಬೆಳಿಗ್ಗೆ ಸಮಯ 10.00 ಗಂಟೆ ಸುಮಾರಿಗೆ ನಮ್ಮ ಜಮೀನಿಗೆ ಕಲ್ಲುಕಂಬ ನೆಡಲು ಬಂದಿರುತ್ತಾನೆ. ಆಗ ನಾನು ಈ ಜಮೀನು ನನ್ನದು, ನನ್ನ ಜಮೀನಿಗೆ ಏಕೆ ಕಲ್ಲುಕಂಬ ನಡೆಲು ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ಬೋಳೀಮಗನೇ, ಸೂಳೇಮಗನೇ ಎಂದು ಇನ್ನಿತರ ಅವಾಚ್ಯ ಶಬ್ದಗಳಿಂದ ಬೈದು, ಇನ್ನೊಮ್ಮೆ ಈ ಜಮೀನಿಗೆ ಬಂದರೆ ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾನೆ. ನಂತರ ಚಾಸಾ-2- ದೇವನಾಯಕ, ಚಾಸಾ-3 - ಸೋಮನಾಯಕ ಸ್ಥಳಕ್ಕೆ ಬಂದು ನನಗು ಮತ್ತು

ಆರೋಪಿತನಿಗು ಸಮಾಧಾನ ಮಾಡಿ ಹೋಗಿರುತ್ತಾರೆ. ನಂತರ ನಾನು ದಿನಾಂಕಃ 05.04.2023 ರಂದು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಬಂದು ಲಿಖಿತ ಪಿರ್ಯಾದನ್ನು ಕೊಟ್ಟಿರುತ್ತೇನೆ. ಪಿರ್ಯಾದನ್ನು ನಿ.ಪಿ.-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು. ಪಿರ್ಯಾದು ಕೊಟ್ಟ ದಿನವೇ ಪೋಲೀಸರು ಬೆಳಿಗ್ಗೆ 10.30 ಕ್ಕೆ ಘಟನಾ ಸ್ಥಳಕ್ಕೆ ಬಂದು ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ. ಘಟನೆಯ ಸಂಬಂಧ ಪೋಲೀಸರ ಮುಂದೆ ನಾನು ಮರು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಅರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**